## ಸೂಕ್ತಿಪ್ರಭ

ತನ್ನ ಕುರಿತು ಆಲೋಚಿಸುವುದು ಸ್ವಾರ್ಥವಾಗುವುದಿಲ್ಲ. ಯಾರು ತನ್ನನ್ನು ಕುರಿತು ಆಲೋಚಿಸುವುದಿಲ್ಲವೋ, ಅವನು ಆಲೋಚಿಸುವುದೇ ಇಲ್ಲ. —ಆಸ್ಕರ್ ವೈಲ್ಡ್

ಕೆಲವರು ಈ ಜಗತ್ತಿನಲ್ಲಿರುವಾಗ ನರಕವನ್ನು ಸೃಷ್ಟಿಸಿ ಸ್ವರ್ಗಕ್ಕೆ ಹೋಗಬಯಸುತ್ತಾರೆ. —ಡಾ. ಎಸ್. ರಾಧಾಕೃಷ್ಣನ್

ಮಲಗಿರುವ ಕಂದನನ್ನು ಎಬ್ಬಿಸಬೇಡಿ. ಅದು ಜೀವನದ ಸವಿಯನ್ನು ಕುರಿತು ಕನಸು ಕಾಣುತ್ತಿರಬಹುದು.
—ಖಲೀಲ್ ಗಿಬ್ರಾನ್

ಬೆಳಗಾಗೆದ್ದು ನಾನು ನಸುನಗುತ್ತೇನೆ. ನನ್ನ ಮುಂದೆ ಇಂದು ಹೊಸ ಹೊಸ ಇಪ್ಪತ್ತನಾಲ್ಕು ಘಂಟೆಗಳಿವೆ. ಪ್ರತಿಕ್ಷಣವನ್ನು ಪೂರ್ಣವಾಗಿ ಜೀವಿಸಿ, ಎಲ್ಲ ಜೀವಿಗಳನ್ನೂ ಕರುಣೆಯಿಂದ ನೋಡುವೆ ಎಂಬ ಸಂಕಲ್ಪದಿಂದ ಪ್ರಾರಂಭಿಸುತ್ತೇನೆ.
—ತಿಚ್ ನ್ಹಾತ್ ಹನ್ಹ್

ಈ ಶರೀರವೆಂಬುದು ನಿಜವಾಗಿಯೂ ಇದೆಯೇ? ನಾವು ಈ ಶರೀರವನ್ನು ಇಂದ್ರಿಯಗಳ ಮೂಲಕ ಗ್ರಹಿಸುತ್ತೇವೆ. ಆದರೆ ಇಂದ್ರಿಯಗಳು ಅದೇ ದೇಹದ ಅಂಗಗಳು. ದೇಹವೇ ದೇಹವಿದೆ ಎಂದು ಹೇಳಿದಂತಾಯಿತು ಇದು. ಇದನ್ನು ನಾವು ಸಂದೇಹದಿಂದಲೇ ನೋಡಬೇಕು ಏಕೆಂದರೆ ಇದು ಒಬ್ಬ ಕಳ್ಳನು ತಾನು ಸತ್ಯವಂತ ಎಂದು ಹೇಳುವಂತಿದೆ. —ರಾಬರ್ಟ್ ಪೋವೆಲ್

ಈ ಸುಂದರವಾದ ಜಗತ್ತನ್ನು ಸೃಷ್ಟಿಮಾಡಿದ ದೇವರೇ! ನಿನ್ನ ಸಂತರನ್ನು ಸ್ವೀಕರಿಸಲು ಪ್ರಪಂಚವು ಎಂದು ಸಿದ್ಧವಾಗುವುದು? ಇನ್ನೆಷ್ಟು ಕಾಯಬೇಕು, ಮತ್ತೆಷ್ಟು ಕಾಯಬೇಕು ಹೇ ದೇವರೇ? —ಜಾರ್ಜ್ ಬರ್ನಾರ್ಡ್ ಷಾ

ನಮ್ಮ ಸುತ್ತ ಆಗುವ ಘಟನೆಗಳನ್ನು ನಿಯಂತ್ರಿಸಲಾರೆವು ನಾವು. ಆದರೆ ಅವುಗಳಿಗೆ ತೋರುವ ಪ್ರತಿಕ್ರಿಯೆಗಳ ಮೇಲೆ ನಮಗೆ ಹತೋಟಿಯಿದೆ. —ಡಾ. ಎಸ್. ರಾಧಾಕೃಷ್ಣನ್

ಸದಾ ಕೊಡಲು ಬಯಸುವ, ಸ್ವೀಕರಿಸಲು ನಿರಾಕರಿಸುವ ಸೌಂದರ್ಯವೇ ಜೀವಿಯನ್ನು ಆಕರ್ಷಿಸಬಲ್ಲದು.
—ಖಲೀಲ್ ಗಿಬ್ರಾನ್

ನೋವು ಸಂತಸಗಳ ಮಧ್ಯೆ ನನಗೇನಾದರೂ ಆಯ್ಕೆಯಿದ್ದರೆ, ನನ್ನ ಹೃದಯದ ಬೇಗುದಿಯ ಬದಲಿಗೆ ಇಡೀ ಜಗತ್ತಿನ ಸುಖಗಳನ್ನು ನೀಡಿದರೂ ವಿನಿಮಯ ಮಾಡಲಾರೆ. —ಖಲೀಲ್ ಗಿಬ್ರಾನ್

## ಪ್ರಾರ್ಥನೆ

**ಶ್ರೀಮಧ್ವಾಚಾರ್ಯರಿಂದ ರಚಿತವಾದ**
**ಹರಿಸ್ತುತಿಗಳು**

**ನಮೋ ನಮೋಽಶೇಷವಿಶೇಷಪೂರ್ಣ**
**ಗುಣೈಕಧಾಮ್ನೇ ಪುರುಷೋತ್ತಮಾಯ ।**
**ಭಕ್ತಾನುಕಂಪಾದತಿಶುದ್ಧಸಂವಿತ್–**
**ಧಾತ್ರೇಽನುಪಾಧಿಪ್ರಿಯ ಸದ್ಗುಣಾತ್ಮನೇ ॥**

ಸಮಸ್ತ ವಿಶೇಷಗಳುಳ್ಳ ಪೂರ್ಣವಾದ ಜ್ಞಾನಾನಂದಾದಿ ಗುಣಗಳಿಗೆ ಮುಖ್ಯಾಶ್ರಯನಾದ, ಭಕ್ತರ ಮೇಲಿನ ದಯೆಯಿಂದ ಅತ್ಯಂತ ಪರಿಶುದ್ಧವಾದ ಜ್ಞಾನವನ್ನು ಕೊಡತಕ್ಕ, (ಭಕ್ತರಲ್ಲಿ) ನಿರ್ವ್ಯಾಜವಾದ ಪ್ರೀತಿಯುಳ್ಳವನೂ, ಸದ್ಗುಣಸ್ವರೂಪನೂ ಆಗಿರುವ ಪುರುಷೋತ್ತಮನಿಗೆ ನಮಸ್ಕಾರ, ನಮಸ್ಕಾರ.

**ಜಯತಿ ಹರಿರಚಿಂತ್ಯಃ ಸರ್ವದೇವೈಕವಂದ್ಯಃ**
**ಪರಮಗುರುರಭೀಷ್ಟಾವಾಪ್ತಿದಃ ಸಜ್ಜನಾನಾಮ್ ।**
**ನಿಖಿಲಗುಣಗಣಾರ್ಣೋ ನಿತ್ಯನಿರ್ಮುಕ್ತದೋಷಃ**
**ಸರಸಿಜನಯನೋಽಸೌ ಶ್ರೀಪತಿರ್ಮಾನದೋ ನಃ ॥**

ಎಲ್ಲ ದೇವತೆಗಳಿಂದಲೂ ನಮಸ್ಕರಿಸಲ್ಪಡುವ ಅಚಿಂತ್ಯನೂ, ಸದ್ಗುರುವೂ, ಸಜ್ಜನರ ಇಷ್ಟವನ್ನು ನೆರವೇರಿಸುವವನೂ, ಸಕಲ ಗುಣಸಾಗರನೂ, ಎಂದೆಂದಿಗೂ ದೋಷರಹಿತನಾದವನೂ, ಕಮಲ ನಯನನೂ, ನಮಗೆ ಗೌರವವನ್ನು ಉಂಟು ಮಾಡುವವನೂ ಆದ ಶ್ರೀಪತಿಗೆ(ಹರಿಗೆ)ಜಯವಾಗಲಿ.

**ಅತ್ಯುದ್ರಿಕ್ತವಿದೋಷಸತ್ಸುಖಮಹಾಜ್ಞಾನೈಕತಾನಪ್ರಭಾ**
**ಸರ್ವಪ್ರಾಭವ–ಶಕ್ತಿ–ಭೋಗ–**
**ಬಲಸತ್ಸಾರಾತ್ಮ–ದಿವ್ಯಾಕೃತಿಮ್ ।**
**ಸೃಷ್ಟಿಸ್ಥಾನ–ನಿರೋಧ–ನಿತ್ಯನಿಯತಿ–ಜ್ಞಾನಪ್ರಕಾಶಾವೃತಿ**
**ಧ್ವಾಂತಾಮೋಕ್ಷವಿಮೋಕ್ಷದಂ**
**ಹರಿಮಜಂ ನಿತ್ಯಂ ಸದೋಪಾಸ್ಮಹೇ ॥**

ಎಲ್ಲದಕ್ಕಿಂತಲೂ ಮಿಗಿಲಾದ; ನಿರ್ದೋಷನೂ ಅತ್ಯುತ್ತಮ ಆನಂದಮಯನೂ, ತನ್ನಲ್ಲಿ ಹಾಗೂ ಅನ್ಯರಲ್ಲಿರುವ ಸರ್ವ ವಿಶೇಷಗಳ ಅರಿವುಳ್ಳವನೂ, ತನ್ನಲ್ಲೇ ಇರುವ ಕಾಂತಿ, ಪ್ರಭುಶಕ್ತಿ, ಕ್ರಿಯಾಶಕ್ತಿ, ಇಚ್ಛಾಶಕ್ತಿ, ಭೋಗ, ಬಲ ಇವುಗಳ ಉತ್ತಮ ಸಾರಸ್ವರೂಪವಾದ ದಿವ್ಯದೇಹವುಳ್ಳವನೂ; ಜಗತ್ತಿಗೆ ಸೃಷ್ಟಿ–ಸ್ಥಿತಿ–ಸಂಹಾರ, ನಿತ್ಯವಸ್ತುಗಳ ನಿಯಮನ, ಜ್ಞಾನ–ಪ್ರಕಾಶ–ಅಜ್ಞಾನ–ಆವರಣ, ಸಂಸಾರ, ಮೋಕ್ಷಗಳನ್ನು ಕೊಡುವವನೂ; ಜನ್ಮವಿಲ್ಲದವನೂ; ಅವಿನಾಶಿಯೂ ಆಗಿರುವ, ಪಾಪ ಪರಿಹಾರಕನಾದುದರಿಂದ ಹರಿಯೆನಿಸಿದ ವಿಷ್ಣುವನ್ನು ಸರ್ವದಾ ಉಪಾಸನೆ ಮಾಡುತ್ತೇನೆ.